ಮೂಲ ದಾವಾ ಸಂಖ್ಯೆ. 48/2016 ಪಿ ಡಬ್ಲ್ಯೂ 1
(ದಿನಾಂಕ 12-08-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಸಿ ಬಿ ಆರ್ ವಕೀಲರಿಂದಃ-

ನನಗೆ ಹೂವಿನಹಡಗಲಿ ಊರಿಗೆ ವಿವಾಹ ಮಾಡಿಕೊಟ್ಟಿದ್ದಾರೆ. ನನ್ನ ವಿವಾಹ ಸನ್ 2004 ರಲ್ಲಿ ಆಗಿದೆ. ನಾನು ನನ್ನ ಗಂಡನ ಜೊತೆ ಒಂದು ವರ್ಷ ಗಂಡನ ಮನೆಯಲ್ಲಿ ವಾಸವಿದ್ದೆ. ನನ್ನ ವಿವಾಹವಾದಾಗ ನನಗೆ 20 ವರ್ಷ ವಯಸ್ಸಾಗಿತ್ತು. ನನ್ನ ಸಾಕ್ಷ್ಯ ಪ್ರಮಾಣಪತದಲ್ಲಿ ಬರೆದಿರುವ ವಿಚಾರದ ಬಗ್ಗೆ ನನಗೆ ಮಾಹಿತಿ ಇದೆ. ಹರಿಜನ ಮರಿಯಮ್ಮ ಇವರು ಮನೆಯ ಬೇಸ್ ಮೆಂಟನ್ನು ಕಲ್ಲಿನಿಂದ ಕಟ್ಟಿರುತ್ತಾರೆ. ಸದರಿ ಕಲ್ಲಿನ ಬೆಸ್ ಮೆಂಟನ್ನು ಹರಿಜನ ಮರಿಯಮ್ಮ ಇವರು ಸುಮಾರು ಒಂದು ತಿಂಗಳಲ್ಲಿ ಕಟ್ಟಿರುತ್ತಾರೆ. ಹರಿಜನ ಮರಿಯಮ್ಮ ಇವರ ತಾಯಿಯನ್ನು ನಾನು ನೋಡಿಲ್ಲ. ದಾವಾಸ್ತಿಯಲ್ಲಿ ಪ್ರತಿವಾದಿಯ ತಾಯಿ ತನ್ನ ಜೀವಿತಾವಧಿಯಲ್ಲಿ ಸ್ವಾಧೀನಾನುಭವದಲ್ಲಿ ಇದ್ದಳು ಎಂದರೆ ಸಾಕ್ಷಿಯು ಸನ್ 2005 ನೇ ಇಸ್ವಿಯಿಂದ ನಾನು ಸ್ವಾಧೀನದಲ್ಲಿದ್ದೇನೆ ಎನ್ನುತ್ತಾರೆ. ದಾವಾಸ್ತಿಯಲ್ಲಿ ಮೊದಲು ಗುಡಿಸಲು ಇತ್ತು ಅದರಲ್ಲಿ ಪ್ರತಿವಾದಿಯು ಜನಿಸಿರುತ್ತಾಳೆಂದರೆ ಸರಿಯಲ್ಲ. ಸರ್ಕಾರದವರು ನನಗೆ ಬೇರೆ ಮನೆಯನ್ನು ನೀಡಿದ್ದು ನಾನು ಅದರಲ್ಲಿ ವಾಸವಾಗಿದ್ದೇನೆಂದರೆ ಸರಿಯಲ್ಲ. ದಾವಾಸ್ತಿಯಲ್ಲಿ ಪ್ರತಿವಾದಿಯು ಮನೆ ಕಟ್ಟಿದ್ದಾರೆನ್ನುವ ಬಗ್ಗೆ ಅದರ ಅಳತೆ ನಿಮಗೆ ಹೇಳಲು ಬರುತ್ತಾ ಎಂದರೆಸ ಸಾಕ್ಷಿಯು ಅವರು ಮನೆಯನ್ನು ಕಟ್ಟಿಲ್ಲ ಬೇಸ್ ಮೆಂಟ್ ಹಾಕಿದ್ದಾರೆನ್ನುತ್ತಾರೆ. ಸದರಿ ಬೇಸ್ ಮೆಂಟಿನ ಅಳತೆ ನನಗೆ ಹೇಳಲು ಬರುವುದಿಲ್ಲ. ನಾನು ವಾಸವಾಗಿರುವ ಮನೆ ನಂಬರ್ ನನಗೆ ಹೇಳಲು ಬರುವುದಿಲ್ಲ, ನಾನು ಬಾಡಿಗೆ ಮನೆಯಲ್ಲಿ ವಾಸವಾಗಿದ್ದೇನೆ. ಪ್ರತಿವಾದಿಯು ಬೇಸ್ ಮೆಂಟ್ ಹಾಕಿರುವ ಆಸ್ತಿಯ ಚಕ್ಕುಬಂದಿ ಪೂಃ ರಸ್ತೆ, ಪಃ ಅನ್ನಪೂರ್ಣಮ್ಮನವರ ಹೊಲ, ಉಃಚಿದಾನಂದ್ ಇವರ ಖಾಲಿ ನಿವೇಶನ ಹಾಗೂ ದಃ ಚರಂಡಿ ಆ ನಂತರ ಮರಿಯಮ್ಮನ ಮನೆ ಇರುತ್ತದೆ. ಸದರಿ ಚಕ್ಕುಬಂದಿ ಮಧ್ಯದಲ್ಲಿರುವ ಆಸ್ತಿಯಲ್ಲಿ ಸುಮಾರು ವರ್ಷದಿಂದ ಪ್ರತಿವಾದಿ ಮತ್ತು ಅವರ ತಾಯಿ ಸ್ವಾಧೀನದಲ್ಲಿರುತ್ತಾರೆಂದರೆ ಸಾಕ್ಷಿಯು ಸದರಿ ಆಸ್ತಿ ನನ್ನದೇ ಇರುತ್ತದೆನ್ನುತ್ತಾರೆ. ಸದರಿ ಆಸ್ತಿ ನನ್ನದೇ ಅಂತಾ ತೋರಿಸಲು ಸರ್ಕಾರದವರು ನೀಡಿರುವಂತಹ ಪಟ್ಟಾವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಾನು ಯಾವುದೇ ಪಟ್ಟಾವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ, ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ನೀವು ಸದರಿ ಆಸ್ತಿಯನ್ನು ಮಂಜೂರು ಮಾಡಿಸಿಕೊಳ್ಳುವ ಕುರಿತು ಸರ್ಕಾರಕ್ಕೆ ಅಥವಾ ತಹಶೀಲ್ದಾರ್ ಕಾರ್ಯಾಲಯಕ್ಕೆ ಅರ್ಜಿ ಏನಾದರೂ ಕೊಟ್ಟಿದ್ದೀರಾ ಎಂದರೆ ಸಾಕ್ಷಿಯು ಅದು

ಪಂಚಾಯ್ತಿ ಆಸ್ತಿ ಆ ಕಾರಣದಿಂದಾಗಿ ನಾನು ಪಂಚಾಯಿತಿಗೆ ಅರ್ಜಿ ಕೊಟ್ಟಿದ್ದೇನೆ ಎನ್ನುತ್ತಾರೆ. ಸದರಿ ಆಸ್ತಿ ಪಂಚಾಯ್ತಿ ಆಸ್ತಿ ಎನ್ನುವ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿದ್ದೇನೆ, ನಾನು ಯಾವುದೇ ದಾಖಲೆಯನ್ನು ಹಾಜರು ಮಾಡಿಲ್ಲ, ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಸನ್ 2012 ರಲ್ಲಿ ಪಂಚಾಯ್ತಿಗೆ ಅರ್ಜಿ ನೀಡಿದ್ದೇನೆ. ಪ್ರತಿವಾದಿಯರಿಗೆ ಕಟ್ಟಡ ನಿರ್ಮಾಣ ಮಾಡಲು ಪಂಚಾಯ್ತಿಯವರು ಪರವಾನಿಗೆ ನೀಡಿದ್ದು, ಆ ವಿಚಾರ ನಿಮಗೆ ಗೊತ್ತಾ ಎಂದರೆ ಸಾಕ್ಷಿಯು ಯಾವುದೇ ಪರವಾನಿಗೆ ನೀಡಿಲ್ಲ ಆ ಜಾಗ ನನ್ನದು ಎನ್ನುತ್ತಾರೆ. ಪ್ರತಿವಾದಿಯು ಪರಿಶಿಷ್ಠ ಜಾತಿಗೆ ಸೇರಿದ ದೇವದಾಸಿ ಮಹಿಳೆ ಎಂದರೆ ಸರಿ. ಅವಳಿಗೆ ನೋಡಿಕೊಳ್ಳಲು ಯಾರು ಇಲ್ಲವೆಂದರೆ ಸರಿ. ಮನೆ ಕಟ್ಟಿಕೊಳ್ಳಲು ಸದರಿ ಪ್ರತಿವಾದಿಗೆ ದೇವದಾಸಿ ಪುನರ್ವಸತಿ ಯೋಜನೆಯಡಿಯಲ್ಲಿ ಸಹಾಯಧನವನ್ನು ಮಂಜೂರು ಮಾಡಿದ್ದರು ಈ ವಿಚಾರ ನಿಮಗೆ ಗೊತ್ತಾ ಎಂದರೆ ನನಗೆ ಗೊತ್ತಿಲ್ಲ. ಪಂಚಾಯ್ತಿಯವರು ಸಹಾ ಪ್ರತಿವಾದಿಗೆ ದಾವಾಸ್ತಿಯಲ್ಲಿ ಮನೆ ನಿರ್ಮಾಣ ಮಾಡಿಕೊಳ್ಳಿ ಇಲ್ಲವಾದಲ್ಲಿ ನಿಮಗೆ ಮಂಜೂರಾದ ಸಹಾಯಧನ ರದ್ದಾಗುತ್ತದೆಂತಾ ಅನೇಕ ಬಾರಿ ಅವಳಿಗೆ ನೋಟೀಸನ್ನು ಸಹಾ ನೀಡಿರುತ್ತಾರೆ ಈ ವಿಚಾರ ನಿಮಗೆ ಗೊತ್ತಿದೆಯಾ ಎಂದರೆ ಇಲ್ಲ. ನಾನು ಗ್ರಾಮ ಪಂಚಾಯ್ತಿ ಅಧಿಕಾರಿಗಳೊಂದಿಗೆ ಶಾಮೀಲಾಗಿ ದಾವಾಸ್ತಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ಸೃಷ್ಟಿ ಮಾಡಿರುತ್ತೇನೆಂದರೆ ಸರಿಯಲ್ಲ. ದಾವಾಸ್ತಿಗೆ ಸಂಬಂಧಿಸಿದ ಯಾವುದೇ ಹಕ್ಕುಪತ್ರಗಳು ನನ್ನ ಬಳಿ ಇರುವುದಿಲ್ಲವೆಂದರೆ ಸರಿಯಲ್ಲ.

ದಾವಾಸ್ತಿಯಲ್ಲಿ ಪ್ರತಿವಾದಿ ಸ್ವಾಧೀನದಲ್ಲಿರುವುದರಿಂದ ಪಂಚಾಯ್ತಿಯವರಿಗೆ ದಾವಾಸ್ತಿಗೆ ಸಂಬಂಧಿಸಿದಂತೆ ನನಗೆ ಪಟ್ಟಾ ಅಥವಾ ಕರಆಕರಣೆಯ ಯಾದಿಗಳನ್ನು ನೀಡಲು ಯಾವುದೇ ಅಧಿಕಾರ ಇರುವುದಿಲ್ಲವೆಂದರೆ ಸರಿಯಲ್ಲ. ನಾನು ಪಡೆದುಕೊಂಡಿರುವಂತಹ ಕರಆಕರಕಣೆಯ ಯಾದಿಗೂ ಮತ್ತು ದಾವಾಸ್ತಿಗೂ ಯಾವುದೇ ಸಂಬಂಧವಿಲ್ಲವೆಂದರೆ ಸರಿಯಲ್ಲ.

ಪ್ರತಿವಾದಿಗೆ ಕಟ್ಟಡ ನಿರ್ಮಾಣಕ್ಕಾಗಿ ರಶೀದಿ ನಂ.897 ರಂತೆ ದಿಃ 25-01-2016 ರಂದು ಪರವಾನಿಗೆಯನ್ನು ಪಂಚಾಯ್ತಿಯವರು ನೀಡಿರುವ ವಿಚಾರ ನನಗೆ ಸ್ಪಷ್ಟವಾಗಿ ಗೊತ್ತಿದೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ನಕಾಶೆಯಂತೆ ಪ್ರತಿವಾದಿಯು ಬೇಸ್ ಮೆಂಟನ್ನು ತನ್ನ ಆಸ್ತಿಯಲ್ಲಿ ಹಾಕಿಕೊಂಡಿರುತ್ತಾಳೆಂದರೆ ಸರಿಯಲ್ಲ. ಸಾಕ್ಷಿಗೆ ಪೋಟೋವನ್ನು ತೋರಿಸಿ ಅದರಲ್ಲಿ ಪ್ರತಿವಾದಿಯು ಕಲ್ಲು ಮತ್ತು ಇಟ್ಟಿಗೆಯನ್ನು ಹಾಕಿಕೊಂಡಿರುತ್ತಾಳೆಂದರೆ ಸಾಕ್ಷಿಯ ಸದರಿ ಪೋಟೋ ನೋಡಿ ಹೌದು ಹಾಕಿಕೊಂಡಿದ್ದಾಳೆ ನನಗೆ ಗೊತ್ತಿಲ್ಲದ ಹಾಗೆ

ಹಾಕಿಕೊಂಡಿದ್ದಾಳೆ ಆ ಜಾಗ ನನ್ನದು ಅಂತಾ ಉತ್ತರಿಸಿರುತ್ತಾರೆ. ಸದರಿ ಪೋಟೋವನ್ನು ನಿಡಿ-1 ಅಂತಾ ಗುರುತಿಸಲಾಯಿತು.

ಸದರಿ ಆಸ್ತಿ ಮೂಲತಃ ಪ್ರತಿವಾದಿಯ ತಾಯಿ ಇವರದು ಈ ವಿಚಾರ ನಿಮಗೆ ಗೊತ್ತಿದೆಯಾ ಅಂದರೆ ಇಲ್ಲ. ದಾವಾಸ್ತಿಗೆ ಸಂಬಂಧಿಸಿದಂತೆ ಕರಆಕರಣೆಯ ಯಾದಿ ಮತ್ತು ನಮೂನೆ ನಂ.-11 ಪ್ರತಿವಾದಿಯ ಹೆಸರಿಗೆ ನಮೂದು ಇದೆ ಈ ವಿಚಾರ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಪ್ರತಿವಾದಿಯ ತಾಯಿಗೆ ಸಂಬಂಧಿಸಿದ ಆಸ್ತಿ ಮತ್ತು ಜಮೀನು ತುಂಗಭದ್ರಾ ಆಣೆಕಟ್ಟಿಗಾಗಿ ಮುಳುಗಡೆಯಾಗಿದ್ದರಿಂದ ದಾವಾಸ್ತಿಯನ್ನು ಸರ್ಕಾರದವರು ಪ್ರತಿವಾದಿಯ ತಾಯಿಗೆ ಮಂಜೂರು ಮಾಡಿರುತ್ತಾರೆ ಈ ವಿಚಾರ ನಿಮಗೆ ಗೊತ್ತಿರುತ್ತದೆಂದರೆ ಸರಿಯಲ್ಲ. ಪಂಚಾಯ್ತಿಯವರು ದಾವಾಸ್ತಿಯನ್ನು ಪರಿಶೀಲಿಸಿ ಸ್ಥಳ ಅಳತೆ ಮಾಡಿರುತ್ತಾರೆ ಈ ವಿಚಾರ ನಿಮಗೆ ಗೊತ್ತಿದೆ ಎಂದರೆ ಸಾಕ್ಷಿಯು ಅವರು ಅಳತೆ ಮಾಡಿ ನನಗೆ ನೀಡಿರುತ್ತಾರೆನ್ನುತ್ತಾರೆ. ಸಾಕ್ಷಿ ಮರಿಲಿಂಗನಗೌಡ ಇವರು ನನಗೆ ವಿಶ್ವಾಸಿಕರು ಎಂದರೆ ಸಾಕ್ಷಿಯು ಅವರು ಊರಿನ ಹಿರಿಯರು ಎನ್ನುತ್ತಾರೆ. ದಾವಾಸ್ತಿಯಲ್ಲಿ ಪ್ರತಿವಾದಿಯು ಸ್ವಾಧೀನದಲ್ಲಿರುವುದರಿಂದ ಪ್ರತಿವಾದಿಯು ನನಗೆ ಅಡ್ಡಿಪಡಿಸುವ ಪ್ರಶ್ನೆ ಬರುವುದಿಲ್ಲವೆಂದರೆ ಸರಿಯಲ್ಲ. ಪ್ರತಿವಾದಿ ಮತ್ತು ಅವರ ತಾಯಿ ಸುಮಾರು ೮೦-೯೦ ವರ್ಷದಿಂದ ಸ್ವಾಧೀನಾನುಭವದಲ್ಲಿರುತ್ತಾರೆಂದರೆ ಸರಿಯಲ್ಲ. ಪ್ರತಿವಾದಿಯರಿಗೆ ಹಿಂದು ಮುಂದು ಯಾರೂ ನೋಡಿಕೊಳ್ಳುವವರು ಇಲ್ಲ ಆ ಕಾರಣದಿಂದಾಗಿ ದಾವಾಸ್ತಿಯನ್ನು ಕಬಳಿಸಲು ಸುಳ್ಳು ದಾವೆಯನ್ನು ದಾಖಲಿಸಿರುತ್ತೇನೆಂದರೆ ಸರಿಯಲ್ಲ.

ನನ್ನ ಸಹೋದರರರೆಲ್ಲರಿಗೂ ಪ್ರತ್ಯೆಕವಾಗಿ ಮನೆಗಳು ಇವೆ ಎಂದರೆ ಸರಿ. ಹೇಗಾದರೂ ಆಸ್ತಿಯನ್ನು ಕಬಳಿಸಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ